ಶ್ರೀ ಕೆ. ಪ್ರಕಾಪ ಚಂದ್ರ ಶೆಟ್ಟಿ.—ನಾನು ಕೇಳಿರುವಂಥ ಪ್ರಶ್ನೆ ಕಳೆದ ೧೯೮೬-೮೭ ಮತ್ತು ೧೯೮೭-೮೮ರಲ್ಲಿ ಬಿಡುಗಡೆ ಮಾಡಿದಂಥ ಹಣ ನಮ್ಮ ಜಿಲ್ಲೆಯ ಎರಡು ಮುನಿಸಿಪಾಲಿಟಿಗಳಿಗೆ ಬಿಟ್ಟರೆ ಬೇರೆ ಕಡೆ ಬಿಡುಗಡೆ ಮಾಡಿಲ್ಲ. ಇದಕ್ಕೆ ಕಾರಣ ಏನು ಎಂಬುದು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾಳೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು.—ಹೆಲ್ಡ್ ಓವರ್ ಮಾಡಿದ್ದೇನೆ, ಉತ್ತರ ಡೀಟೈಲಾಗಿ ಕೊಡಿಸುತ್ತೇನೆ.

ನಂಜನಗೂಡಿನಲ್ಲಿರುವ ಸಾರ್ವಜನಿಕ ಆಸ್ಪತ್ರೆ

೧೫೬೮. ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಂಜನಗೂಡು ಜನರಲ್ ಆಸ್ಪತ್ರೆಯನ್ನು ೩೦ ಹಾಸಿಗೆಯಿಂದ ೫೦ ಹಾಸಿಗೆ ಆಸ್ಪತ್ರೆಯನ್ನಾಗಿ ಪರಿವರ್ತಿಸಲು ಸರ್ಕಾರವು ಮಂಜೂರಾತಿ ನೀಡಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಯಾವಾಗ ನೀಡಲಾಗುವುದು?

ಇ) ಈಗ ಹಾಲಿ ನಡೆಯುತ್ತಿರುವ ಕೆಲಸವು ಪೂರ್ಣವಾಗಿ ಹೊಸ ಆಸ್ಪತ್ರೆಯು ಯಾವಾಗ ಕೆಲಸ ನಿರ್ವಹಿಸುವುದು?

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಇಲ್ಲ.

ಆ) ಆದಷ್ಟು ಬೇಗ.

ಇ) ಕಟ್ಟಡವು ಪೂರ್ಣಗೊಂಡ ನಂತರ ಆಸ್ಪತ್ರೆಯು ಹೊಸ ಕಟ್ಟಡದಲ್ಲಿ ಕಾರ್ಯನಿರ್ವಹಿಸುವುದು.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಕೂಡಾ ನಂಜನಗೂಡು ತಾಲ್ಲೂಕನ್ನು ರೆಪ್ರೆಸೆಂಟ್ ಮಾಡುತ್ತಾರೆ. ೩೦ ಹಾಸಿಗೆ ಆಸ್ಪತ್ರೆಯನ್ನು ೫೦ ಹಾಸಿಗೆಗಳಿಗೆ ಏರಿಸುವ ಬಗ್ಗೆ ಯಾವ ರೀತಿಯ ನಿರ್ಧಾರ ತೆಗೆದುಕೊಳ್ಳುತ್ತೀರಿ? ಕಡಿಮೆ ಜನಸಂಖ್ಯೆ ಇರುವ ತಾಲ್ಲೂಕುಗಳಲ್ಲಿ ೫೦ ಹಾಸಿಗೆಗಳುಳ್ಳ ಆಸ್ಪತ್ರೆಗಳ ಬಗ್ಗೆ ಪರ್ವಾಡು ಮಾಡಿದ್ದು ಸಬ್-ಡಿವಿಜನ್ ಸೆಂಟರ್ ಆದ ನಂಜನಗೂಡಿನಲ್ಲಿ ಹೆಚ್ಚು ಜನಸಂಖ್ಯೆ ಇದ್ದರೂ ೩೦ ಹಾಸಿಗೆಗಳ ಆಸ್ಪತ್ರೆ ಇರುವುದು ಸರಿಯೇ? ಇಲ್ಲಿ ೫೦ ಹಾಸಿಗೆಗಳ ಆಸ್ಪತ್ರೆ ಮಾಡಬೇಕೆಂದು ಮುಖ್ಯ ಮಂತ್ರಿಯವರೂ ಕೂಡಾ ಆದೇಶ ಮಾಡಿದ್ದಾರೆ ೧ ವರ್ಷ ಆದರೂ ಕೂಡ ಕಾರ್ಯಗತ ಮಾಡದೇ ಇರುವುದಕ್ಕೆ ಕಾರಣ ಏನು? ಮಾನ್ಯ ಮಂತ್ರಿಗಳು ಕಟ್ಟಡವು ಪೂರ್ಣಗೊಂಡ ನಂತರ ಆಸ್ಪತ್ರೆಯು ಹೊಸ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುವುದು ಎಂದು ಹೇಳಿದ್ದಾರೆ ಹೊಸ ಕಟ್ಟಡ ಪೂರ್ಣಗೊಳ್ಳಲು ೧ ವರ್ಷ ಆಗಬಹುದು, ೬ ತಿಂಗಳು ಆಗಬಹುದು. ಒಂದೊಂದು ಸಾರಿ ಪೂರ್ಣಗೊಳ್ಳದೇ ಇರಬಹುದು. ಆದ್ದರಿಂದ ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಬಿ. ರಾಚಯ್ಯ.—ಲೋಕೋಪಯೋಗಿ ಇಲಾಖೆಯ ಪ್ರಕಾರ ಇನ್ನು ೬-೭ ತಿಂಗಳೊಳಗೆ ಇದು ಮುಗಿಯುತ್ತದೆ ಇದರ ಬಗ್ಗೆ ನಾವು ಸಾಕಷ್ಟು ಹಣವನ್ನು ಕೂಡಾ ಒದಗಿಸಿದ್ದೇವೆ. ಇಲ್ಲಿ ಮೊದಲು ೩೦ ಹಾಸಿಗೆಗಳುಳ್ಳ ಆಸ್ಪತ್ರೆ ಇದ್ದು ಇದನ್ನು ೫೦ ಹಾಸಿಗೆಗಳುಳ್ಳ ಆಸ್ಪತ್ರೆಯನ್ನಾಗಿ ಮಾಡಲಾಗಿದೆ. ಸರ್ಕಾರದ ಹೊಸ ನೀತಿಯ ಪ್ರಕಾರ ತಾಲ್ಲೂಕು ಮಟ್ಟದ ೫೦ ಹಾಸಿಗೆಗಳುಳ್ಳ ಆಸ್ಪತ್ರೆಗಳನ್ನು ೫೦ ಹಾಸಿಗೆಗಳಿಗೆ ಏರಿಸಬೇಕೆಂದು ಇದೆ ಈ ವರ್ಷ ಆ ಬಗ್ಗೆ ಬಜೆಟ್ ಪ್ರೊವೈಡ್ ಮಾಡಿರಲಿಲ್ಲ. ಆದರೆ ಜಿಲ್ಲಾ ಪರಿಷತ್ತಿನಲ್ಲಿ ಹೆಚ್ಚಿನ ಹಣವನ್ನು ಇದಕ್ಕೆ ಕೊಡಬೇಕೆಂದು ಹೇಳಿದ್ದೇವೆ. ಆದರ ಮುಖಾಂತರ ೫೦ ಹಾಸಿಗೆಯುಳ್ಳ ಆಸ್ಪತ್ರೆ ಮಾಡುವುದಕ್ಕೆ ಮುಂದಿನ ವರ್ಷ ಪ್ರಯತ್ನ ಮಾಡುತ್ತೇವೆ.

ಶ್ರೀ ಡಿ. ಟಿ. ಜಯಕುಮಾರ್.—ಸರ್ಕಾರ ಮಂಜೂರಾತಿಯನ್ನು ಕೊಟ್ಟರೆ ಜಿಲ್ಲಾ ಪರಿಷತ್ತಿನಿಂದ ಹಣ ಬಿಡುಗಡೆಗೆ ನಾವು ಪ್ರಯತ್ನ ಮಾಡುತ್ತೇವೆ. ಈ ಬಗ್ಗೆ ಕಳೆದ ಒಂದು ವರ್ಷದಿಂದ ಸರ್ಕಾರದ ಮಂಜೂರಾತಿ ಸಿಕ್ಕಿಲ್ಲ. ಆದ್ದರಿಂದ ಇದಷ್ಟು ಜಾಗ್ರತೆ ಮಂಜೂರಾತಿ ಕೊಡಬೇಕೆಂದು ಹೇಳುತ್ತೇನೆ.

ಈ ಪ್ರಶ್ನೆಗೆ ಅನ್ವಯ ಆಗದಿದ್ದರೂ ಇನ್ನೊಂದು ಪ್ರಶ್ನೆಯನ್ನು ನಾನು ಕೇಳುತ್ತೇನೆ. ನಂಜನಗೂಡು ತಾಲ್ಲೂಕಿಗೆ ಕಳೆದ ಸಾರಿ ೩೫ ಸಾವಿರ ರೂಪಾಯಿಯ ಮೆಡಿಷನ್ ಕೊಡುತ್ತಿದ್ದು ಅದನ್ನು ೫೦ ಸಾವಿರ ರೂಪಾಯಿಗಳಿಗೆ ಏರಿಸಲಾಯಿತು. ಮತ್ತೆ ಅದನ್ನು ವಾಪಸ್ ಪಡೆದು ಮತ್ತೆ ೩೫ ಸಾವಿರ ರೂಪಾಯಿಗಳ ಔಷಧಿಯನ್ನೇ ಒದಗಿಸಂತಿದ್ದಾರೆ. ಇದು ಬಹಳ ದೊಡ್ಡ ಆಸ್ಪತ್ರೆ ಇದೆ. ಇಲ್ಲಿ ದಿವಸಕ್ಕೆ ೨೦೦, ೩೦೦ ಜನ ಔಟ್ ಪೇಷೆಂಟ್ಸ್ ಬರುತ್ತಾರೆ ಈ ಆಸ್ಪತ್ರೆಯಲ್ಲಿ ಶುಚಿತ್ವದ ಬಗ್ಗೆ ಹೆಚ್ಚು ಗಮನವನ್ನು ಕೊಡುತ್ತಿಲ್ಲ. ಈ ಬಗ್ಗೆ ಸಾಕಷ್ಟು ಜನರು ದೂರುಗಳನ್ನು ಕೊಟ್ಟಿದ್ದು ವಿಷಯ ಪತ್ರಿಕೆಗಳಲ್ಲೂ ಸಹಾ ಬಂದಿರುತ್ತದೆ. ಈ ಬಗ್ಗೆ ತಾಲ್ಲೂಕು ಸಮಿತಿ ಸಭೆಯಲ್ಲೂ ಸಹಾ ಸಾಕಷ್ಟು ದೂರುಗಳು ಬಂದಿವೆ. ಈ ಬಗ್ಗೆ ಮಾನ್ಯ ಸಚಿವರು ಗಮನಹರಿಸಬೇಕು ಹಾಗೂ ಹೆಚ್ಚಿನ ಮೌಲ್ಯದ ಔಷಧಿಯನ್ನು ಕೊಡುವುದಕ್ಕೆ ಹೆಚ್ಚು ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಈಗಾಗಲೇ ನಾವು ಆಲ್ಲಿಗೆ ೧ ಲಕ್ಷ ೨೫ ಸಾವಿರ ರೂಪಾಯಿಗಳನ್ನು ಅಲ್ಲಿಗೆ ಪ್ರೊವೈಡ್ ಮಾಡಿದ್ದೇವೆ ಈ ಆಸ್ಪತ್ರೆ ೫೦ ಹಾಸಿಗೆಗಳ ಆಸ್ಪತ್ರೆಯಾಗಿ ಪರಿವರ್ತನೆಗೊಂಡ ನಂತರ ಆ ಸಂಖ್ಯೆಗೆ ತಕ್ಕ ಹಾಗೆ ಔಷಧಿಗಳನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಸರ್ಕಾರಿ ಹುದ್ದೆಯ ಬಗ್ಗೆ

೧೭೪೭. **ಶ್ರೀ ಆರ್. ರಾಮಯ್ಯ** (ಹಿರಿಯೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದ ಹುದ್ದೆಗಳಿಗೆ ಭರ್ತಿ ಮಾಡಲು ಇರುವ ನಿಯಮಗಳೇನು?

ಆ) ಹುದ್ದೆಗಳನ್ನು ಭರ್ತಿ ಮಾಡುವಾಗ ಕುಟುಂಬದ ಪರಮಾನವನ್ನು ನಿಗದಿಪಡಿಸಿರುವುದೆಷ್ಟು?

ಇ) ಐ.ಎ.ಎಸ್., ಐ.ಪಿ.ಎಸ್. ಹಾಗೂ ಸರ್ಕಾರದ ಉನ್ನತ ಹುದ್ದೆಗಳಿಗೆ ಶ್ರೀಮಂತರು ಹಾಗೂ ಪ್ರಭಾವಿತ ವ್ಯಕ್ತಿಗಳ ಮಕ್ಕಳಿಗೆ ಕೊಡುತ್ತಿರುವುದು ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಕಾನೂನು ಉಲ್ಲಂಘನೆ ಮಾಡಿ ಹುದ್ದೆ ಭರ್ತಿ ಮಾಡಿದ್ದರೆ ಅವರನ್ನು ಆ ಹುದ್ದೆಯಿಂದ ವಜಾ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಸರ್ಕಾರಿ ಸೇವೆಯಲ್ಲಿ ಸಾಮಾನ್ಯ ವರ್ಗದಲ್ಲಿರುವ ವಿವಿಧ ಹುದ್ದೆಗಳಿಗೆ ನೇಮಕಾತಿಯನ್ನು ಕೆಳಕಂಡ ನಿಯಮಾವಳಿಗಳಡಿಯಲ್ಲಿ ಮಾಡಲಾಗುವುದು :

೧) ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, ೧೯೭೭.

೨) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಆಯ್ಕೆಯಿಂದ ನೇರ ನೇಮಕಾತಿ) ನಿಯಮಗಳು, ೧೯೭೩.

೩) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ನೇಮಕಾತಿ ಸಮಿತಿಗಳು) ನಿಯಮಗಳು, ೧೯೮೨

೪) ಕರ್ನಾಟಕ ಸಿವಿಲ್ ಸೇವೆಗಳು (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, ೧೯೭೮

೫) ಕರ್ನಾಟಕ ಸಿವಿಲ್ ಸೇವೆಗಳು (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, ೧೯೮೩.

೬) ಕರ್ನಾಟಕ ಗೆಜೆಟೆಡ್ ಪ್ರೊಬೇಷನರ್‌ಗಳ ನೇಮಕಾತಿ (ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ನೇಮಕ ಮಾಡುವುದು) ನಿಯಮಗಳು, ೧೯೭೬.

ಇನ್ನಿತರ ಹುದ್ದೆಗಳಿಗೆ ಪ್ರತಿಯೊಂದು ಇಲಾಖೆಯಲ್ಲಿ ರೂಪಿಸಿರುವ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ವಿದ್ಯಾರ್ಹತೆ ಹಾಗೂ ನೇಮಕಾತಿ ವಿಧಾನವನ್ನು ನಿಗದಿಪಡಿಸಲಾಗಿದೆ.